ಕಾಮಗಾರಿಯನ್ನು ಡಿಸೆಂಬರ್ 1993ರಲ್ಲಿ ಪ್ರಾರಂಭ ಮಾಡಿದಾಗ ಗಟ್ಟಿ ಪಾಯ ದೊರೆಯದ ಪ್ರಯುಕ್ತ ವಿನ್ಯಾಸವನ್ನು ಮಾರ್ಪಡಿಸಬೇಕಾಯಿತು. ಮರು ವಿನ್ಯಾಸವನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು ಆಗಸ್ಟ್ 1994ರಲ್ಲಿ ಮಂಜೂರು ಮಾಡಿರುತ್ತಾರೆ.

ನವಂಬರ್ 1994ರಲ್ಲಿ ಗುಣ ನಿಯಂತ್ರಣ ವಿಭಾಗದವರು ಸದರಿ ಸೇತುವೆಯನ್ನು ಬಂಡೆಕಲ್ಲಿನ ಮೇಲೆ ಆ್ಯಂಕರೇಜ್ ಮಾಡಬೇಕೆಂದು ಮತ್ತು ತಳಪಾಯ ನಿರ್ಣಯಿಸಲು ಟ್ರಯಲ್ ಬೋರ್ ತೆಗೆದುಕೊಂಡು ವಿನ್ಯಾಸವನ್ನು ಅಂತಿಮಗೊಳಿಸಬೇಕಾಗುತ್ತದೆ. ಈಗ ಪ್ರವಾಹ ಇಳಿಮುಖವಾಗಿರುವುದರಿಂದ ಟ್ರಯಲ್ ಬೋರ್ ತೆಗೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಏತನ್ಮಧ್ಯೆ ನವಂಬರ್ 1994ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳವನ್ನು ಪರಿವೀಕ್ಷಿಸಿ ಮುಂದಿನ ಆದೇಶದವರೆಗೆ ಕಾಮಗಾರಿಯನ್ನು ಮುಂದುವರೆಸಬಾರದೆಂದು ಸೂಚಿಸಿರುತ್ತಾರೆ.

ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಗೆ ಮಳೆಗಾಲ ಪ್ರಾರಂಭಕ್ಕೆ ಮುಂಚೆಯೇ ವಿನ್ಯಾಸಗಳನ್ನು ಅಂತಿಮವಾಗಿ ನಿರ್ಧರಿಸಿ ನದಿಯಲ್ಲಿ ಪ್ರವಾಹ ಇಳಿಮುಖವಾದೊಡನೆ ಕೆಲಸವನ್ನು ಪ್ರಾರಂಭಿಸಿ ಶೀಘ್ರವಾಗಿ ಮುಗಿಸಲು ಮುಖ್ಯ ಇಂಜಿನಿಯರ್ ಅವರು ಕಾರ್ಯಪಾಲಕ ಇಂಜಿನಿಯರ್ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ಸೂಚನೆಯನ್ನು ನೀಡಿರುತ್ತಾರೆ.

ಗ್ರಾಮ ಪಂಚಾಯ್ತಿಗಳಿಗೆ, ಕಾರ್ಯದರ್ಶಿಯವರ ನೇಮಕ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷರೇ, ಗ್ರಾಮ ಪಂಚಾಯಿತಿ ವ್ಯವಸ್ಥೆ ಜಾರಿಗೆ ಬಂದು, ವರ್ಷ ಸಂದರೂ ಇನ್ನೂ ಎಲ್ಲಾ ಪಂಚಾಯತಿಗಳಿಗೆ ಕಾರ್ಯದರ್ಶಿಯವರನ್ನು ನೇಮಕ ಮಾಡಲಿಲ್ಲ. ಇದರಿಂದ ಗ್ರಾಮ ಪಂಚಾಯಿತಿಗಳು ಸುವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಅಗತ್ಯವಾದ ದಾಖಲೆ ಸಿಗುತ್ತಾ ಇಲ್ಲ. ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತಿವೆ. ನೀರು ಸರಬುರಾಜು ಕಾಮಗಾರಿಗಳು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಾ ಇಲ್ಲ. ಕೆಲವು ಗ್ರಾಮ ಪಂಚಾಯತಿ ಕಾರ್ಯದರ್ಶಿಯವರಿಗೆ ಮೂರು ನಾಲ್ಕು ಗ್ರಾಮ ಪಂಚಾಯತಿಗಳ ಹೊಣೆ ಇದೆ. ಆದ್ದರಿಂದ, ಕೆಲವು ಗ್ರಾಮ ಪಂಚಾಯತಿಗಳು ಸರಿಯಾಗಿ ಬಾಗಿಲನ್ನೂ ತೆಗೆಯುತ್ತಿಲ್ಲ. ಆದ್ದರಿಂದ, ಇನ್ನಾದರೂ ಅಗತ್ಯವಿರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಯವರನ್ನು ನೇಮಿಸಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ,

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ರಾಜ್ಯದಲ್ಲಿ ಒಟ್ಟು 5673 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ಸೃಜಿಸಲಾಗಿದೆ. ಸದರಿ ಅಧಿನಿಯಮದ ಪ್ರಕರಣ 111ರ ಪ್ರಕಾರ ಸರ್ಕಾರವು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಕಾರ್ಯದರ್ಶಿಯನ್ನು ನೇಮಿಸಬೇಕಾಗುತ್ತದೆ. ಅದರಂತೆ 6000ಕ್ಕಿಂತ ದರ್ಜೆ ಸಹಾಯಕರ ವೇತನ ಶ್ರೇಣಿಯ 1966 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ಮತ್ತು 6000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ 3707 ಗ್ರಾಮ ಪಂಚಾಯಿತಿಗಳಿಗೆ ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯ 3707 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ಸೃಜಿಸಲಾಗಿದೆ.

2) ಸದರೀ ಹುದ್ದೆಗಳನ್ನು ತುಂಬುವ ಬಗ್ಗೆ ಸರ್ಕಾರವು ದಿನಾಂಕಕ 6-7-94ರ ಆದೇಶದಲ್ಲಿ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದೆ. ಸದರಿ ನೇಮಕಾತಿ ನಿಯಮಗಳು ಕೆಳಕಡಂತಿದೆ.

1) ಪ್ರಥಮ ದರ್ಜೆ ಸಹಾಯಕರ ವೇತನ ಶ್ರೇಣಿಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿ-ಕಂ-ಗ್ರಾಮೀಣಾಭಿವೃದ್ಧಿ ಸಹಾಯಕರ 1966 ಹುದ್ದೆಗಳಲ್ಲಿ

ಅ) ಶೇಕಡಾ 60ರಷ್ಟು ಹುದ್ದೆಗಳನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ-ಕಂ-ದ್ವಿತೀಯ ದರ್ಜೆ ಸಹಾಯಕರಿಂದ ಪದೋನ್ನತಿ ಮೂಲಕ.

ಆ) ಶೇಕಡಾ 20 ರಷ್ಟು ಹುದ್ದೆಗಳನ್ನು ಲೋಕಸೇವೆ ಆಯೋಗದ ಮುಖಾಂತರ ನೇರರ ನೇಮಕಾತಿ ಮೂಲಕ.

ಇ) ಶೇಕಡಾ 20 ರಷ್ಟು ಹುದ್ದೆಗಳನ್ನು ಕಂದಾಯ ಇಲಾಖೆಯ ಪ್ರಥಮ ದರ್ಜೆ ಸಹಾಯಕರಿಂದ ಪ್ರತಿನಿಯೋಜನೆಯ ಮೇಲೆ ತುಂಬಲು ಅವಕಾಶವನ್ನು ಕಲ್ಪಿಸಲಾಗಿದೆ.

ಪ್ರಥಮ ದರ್ಜೆ ಸಹಾಯಕರ ವೇತನ ಶ್ರೇಣಿಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ಮಂಜೂರು ಮಾಡಿರುವ 1996 ಹುದ್ದೆಗಳಲ್ಲಿ ಶ್ರೇಕಡಾ 60 ರಷ್ಟು ಹುದ್ದೆಗಳಿಗೆ ಮಂಡಲ ಪಂಚಾಯಿತಿಗಳು ಆಸ್ತಿತ್ವದಲ್ಲಿದ್ದ ಸಮಯದಲ್ಲಿ ನೇಮಿಸಲಾಗಿದ್ದ ಗ್ರಾಮೀಣಾಭಿವೃದ್ಧಿ ಸಹಾಯಕರನ್ನು ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕರ ವೃಂದದಲ್ಲಿ ವಿಲೀನಗೊಳಿಸಿರುವ ಹಿಂದಿನ ಜೈವಿಕ ಅನಿಲ ಮೈಲ್ವಿಚಾರಕರನ್ನು ನೇಮಿಸಲಾಗಿದೆ. ಹಾಗೂ ಕಂದಾಯ ಇಲಾಖೆಯ ಪ್ರಥಮ ದರ್ಜೆ ಸಹಾಯಕರನ್ನು ಪ್ರತಿನಿಯೋಜನೆ ಮೇಲೆ ನೇಮಿಸಲಾಗಿದೆ. ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಮೂಲಕ ತುಂಬಬೇಕಾಗಿರುವ ಶೇಕಡಾ 20 ರಷ್ಟು ಹುದ್ದೆಗಳಿಗೆ ನೇಮಕಾತಿಯನ್ನು ಇದುವರೆಗೆ ಮಾಡಿರುವುದಿಲ್ಲ.

2) ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯು ಗ್ರಾಮ ಪಂಚಾಯಿತಿ ಕಾರ್ಯದರ್ಶಿ-ಕಂ- ದ್ವಿತೀಯ ದರ್ಜೆ ಸಹಾಯಕರ 3707 ಹುದ್ದೆಗಳನ್ನು ತುಂಬುವ ಬಗ್ಗೆ.

ಅ) ಶೇಕಡಾ 80ರಷ್ಟು ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರ ನೇಮಕಾತಿ ಮಾಡಲು, ಆದರೂ ಸಹ ಮೊದಲ ಭಾರಿ ನೇಮಕಾತಿಗೆ ಕರ್ನಾಟಕ ಸಿವಿಲ್ ಸೇವಾ (ವಿಶೇಷ) ನಿಯಮಗಳು 1982ರ ಪ್ರಕಾರ ಮಿತ ವೇತನ ಪದವೀಧರರಿಂದ ತುಂಬಲು ಅವಕಾಶವಿದೆ.

ಆ) ಶೇಕಡಾ 20 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಆಯ್ಕೆ ಮೂಲಕ ಹಿಂದಿನ ಗ್ರಾಮ ಮಂಡಲ ಪಂಚಾಯಿತಿಗಳಲ್ಲಿ ಪೂರ್ಣವಧಿಯ ಆಧಾರದ ಮೇಲೆ ಕಾರ್ಯದರ್ಶಿ, ಕ್ಲಾರ್ಕ್, ಅಕೌಂಟೆಂಟ್, ಟೈಪಿಸ್ಟ್ ಅಥವಾ ಬಿಲ್ ಕಲೆಕ್ಟರ್ ಹುದ್ದೆಗಳಲ್ಲಿ 10 ವರ್ಷಕ್ಕೆ ಕಮ್ಮಿ ಇಲ್ಲದ ಸೇವೆಯನ್ನು ಸಲ್ಲಿಸಿದ್ದು, ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರುವ ನೌಕರರಿಂದ ತುಂಬಲು ಅವಕಾಶವಿದೆ.

3) ಮೇಲಿನ ಐಟಂ (ಅ)ರ ಪ್ರಕಾರ, 3707ಗ್ರಾಮ ಪಂಚಾಯಿತಿ ಕಾರ್ಯದರ್ಶಿ-ಕಂ-ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಲ್ಲಿ 2977 ಹುದ್ದೆಗಳಿಗೆ ಮಿತವೇತನ ಪದವೀಧರರನ್ನು ನೇಮಿಸಲಾಗಿದೆ. ಮೇಲಿನ ಐಟಂ ಆ)ರ ಪ್ರಕಾರ ಶೇಕಡಾ 20 ರಷ್ಟು (ಅಂದರೆ 730) ಹುದ್ದೆಗಳಿಗೆ ಹಿಂದಿನ ಗ್ರಾಮ ಪಂಚಾಯಿತಿಃ ಮಂಡಲ ಪಂಚಾಯಿತಿ ನೌಕರರಿಂದ, ಪರಿಶಿಷ್ಟ ಜಾತಿಗೆ ಸೇರಿದ 36 ಅಭ್ಯರ್ಥಿಗಳನ್ನು ಪರಿಶಿಷ್ಟ

ಪಂಗಡಕ್ಕೆ ಸೇರಿದ 16 ಅಭ್ಯರ್ಥಿಗಳನ್ನು ಮತ್ತು ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ 562 ಅಭ್ಯರ್ಥಿಗಳನ್ನು ನೇಮಿಸಲಾಗಿದೆ. ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ 95 ಹುದ್ದೆಗಳು ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿರುವ 21 ಹುದ್ದೆಗಳು ಸದರಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಕೊರತೆಯಿಂದ ಖಾಲಿ ಉಳಿದಿವೆ.

4) ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಮೀಸಲಿರಿಸಿದ್ದ 562 ಹುದ್ದೆಗಳನ್ನು ತುಂಬಲು ಎಲ್ಲಾ ಜಿಲ್ಲಾ ಪಂಚಾಯಿತಿಗಳಿಂದ ಸದರಿ ವರ್ಗಕ್ಕೆ ಸೇರಿದ ಅರ್ಹರಿರುವ ಒಟ್ಟು 665 ಅಭ್ಯರ್ಥಿಗಳ ಹೆಸರುಗಳನ್ನು ನೇಮಕಾತಿಗಾಗಿ ಶಿಫಾರಸ್ಸು ಮಾಡಲಾಗಿತ್ತು. ಆದುದರಿಂದ ಜೇಷ್ಠತೆಯು ಆಧಾರದ ಮೇಲೆ 562ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗೆ ಮಾತ್ರ ನೇಮಕಾತಿ ಮಾಡಲಾಯಿತು. ಇರಿಂದಾಗಿ ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ಸುಮಾರು 103 ಜನರು ನೇಮಕ ಹೊಂದಲು ಅರ್ಹರಿದ್ದರೂ ಸಹ ಹುದ್ದೆಗಳ ಕೊರತೆಯಿಂದ ಆಯ್ಕೆಯಾಗಿಲ್ಲ. ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಮೀಸಲಿಟ್ಟಿರುವ "ಕೋಟಾ"ದಲ್ಲಿ ಹುದ್ದೆಗಳು ಖಾಲಿ ಬಿದ್ದಾಗ ಇವರುಗಳ ಪ್ರಕರಣಗಳನ್ನು ಪರಿಗಣಿಲಾಗುವುದು.

11.50 ಎ.ಎಂ.

ಕುಮಟಾದಲ್ಲಿ ದನಕರುಗಳು ಕಾಣೆಯಾಗುತ್ತಿರುವ ಬಗ್ಗೆ

ಡಾ. ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಅಧ್ಯಕ್ಷರೇ, 1ನೇ ಏಪ್ರಿಲ್ 1995ರಂದು ಬೆಳಿಗ್ಗೆ ಕುಮಟಾದಲ್ಲಿ ಬೆಳಿಗ್ಗೆ ಮೇಯಲು ಬಿಟ್ಟ ಆಕಳು ಎತ್ತುಗಳನ್ನು ಕದ್ದು ಮಿನಿ ಟ್ರಕ್ಕುಗಳಲ್ಲಿ ಒಯ್ಯಲು ತಯಾರಾದ ಹಂತದಲ್ಲಿ ನಾಗರೀಕರು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ಅದೇ ಸಂಜೆ ಸಿರ್ಸಿಯಿಂದ ಸಂಶಯಾಸ್ಪದ ರೀತಿಯಲ್ಲಿ ದನಕರುಗಳನ್ನು ಒಯ್ಯುತ್ತಿದ್ದ ಗ್ರಾಯಗಳಾಗಿದ್ದ ಇನ್ನೊಂದು ಮಿನಿಟ್ರಕ್ಕನ್ನು ನಾಗರೀಕರು ನಿಲ್ಲಿಸಿ ಪೋಲೀಸರಿಗೊಪ್ಪಿಸಿದರು. ಎರಡನೆಯ ಪ್ರಕರಣದಲ್ಲಿ ಪೋಲೀಸ್ ಇಲಾಖೆಯ ತನಿಖೆಯಲ್ಲಿ ಸರಿಯಾದ ನ್ಯಾಯ ದೊರಕುವುದು ಸಂಶಯಾಸ್ಪದವಾಗಿದೆ.

ಜಿಲ್ಲೆಯ ಅನೇಕ ಕಡೆಗಳಿಂದ ಮೇಯಲು ಬಿಟ್ಟ ದನಕರುಗಳು ಕಾಣೆಯಾಗಿರುವ ದೂರುಗಳು ಬರುತ್ತಿವೆ. ಈ ವಿಷಯದಲ್ಲಿ ಕೂಲಂಕುಷ ತನಿಖೆಯಾಗಿ ಈ ಜಾಲವನ್ನು ಬಯಲು ಮಾಡಿ ಸಂಬಂಧಪಟ್ಟವರನ್ನು ಶಿಕ್ಷಿಸಿ ಜನತೆಗೆ ಆಗುವ ತೊಂದರೆಯನ್ನು ನಿವಾರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಶ್ರೀ ಗಣಪತಿ ಬೈರುಗೌಡ, ಹರವಟ್ಟ ಗ್ರಾಮ, ಕುಮಟಾ ತಾಲ್ಲೂಕು, ಇವರು ನೀಡಿದ ದೂರಿನಲ್ಲಿ ಅಪಾದಿತರಾದ ಅಕ್ಬರ್ ಕರೀಂ ಸಾಬ್ ಗುಜ್ಜಾರ ಗಲ್ಲಿ, ಕುಮಟಾ ವಾಸಿ ಹಾಗೂ ಗಣಪತಿ ಗೋವಿಂದ ದೇಶಭಂಡಾರಿ, ಕೊಡಕಣ ಗ್ರಾಮ ಕುಮಟಾ ತಾಲ್ಲೂಕು ವಾಸಿ ಇವರು ಆಕಳುಗಳನ್ನು ಅಪಹರಿಸಿ ಮೂರು ಎತ್ತುಗಳನ್ನು 407 ಟಿಂಪೋ ಸಂಖ್ಯೆ ಕೆಎ 20:6273ರಲ್ಲಿ ಭರ್ತಿ ಮಾಡಿದ ಬಗ್ಗೆ ನೀಡಿದ ದೂರಿನ ಅನ್ವಯ, ದಿನಾಂಕ 1.4.95ರಂದು 8.30 ಗಂಟೆಗೆ ಕುಮಟಾ ಪೋಲೀಸ್ ಠಾಣೆಯಲ್ಲಿ ಅಪರಾಧ ಮೊಕದ್ದಮೆ ಸಂಖ್ಯೆ 93:95, ಕಲಂ 379 ಭಾ.ದಂ.ಸಂ. ಜೊತೆಗೆ 11ಡಿ ಪ್ರಿವೆನ್ಷನ್ ಆಫ್ ಕ್ರೂಯಲ್ಟಿ ಟು ಎನಿಮಲ್ಸ್ ಆಕ್ಟ್ ಪ್ರಕಾರ ಸದರಿ ಅಪಾದಿತರ ವಿರುದ್ಧ ಮೊಕದ್ದಮೆ ದಾಖಲು ಮಾಡಲಾಗಿದೆ. ಸಾರ್ವಜನಿಕರು ನೆರದು ಈ ವ್ಯಕ್ತಿಗಳನ್ನು ಹಿಡಿದುಕೊಂಡು ಕುಮಟಾ ಪೋಲೀಸ್ ಠಾಣೆಗೆ ಕರೆತಂದು ಪೋಲೀಸರಿಗೆ ಒಪ್ಪಿಸಿ ದೂರು ನೀಡಿದ ಕಾರಣ ಮೊಕದ್ದಮೆ ದಾಖಲು ಮಾಡಿಕೊಂಡು ಅಪಾದಿತರನ್ನು ಬಂಧಿಸಲಾಗಿದೆ. ಮತ್ತು ಅವರನ್ನು ವಿಚಾರಣೆ ಮಾಡಿ ನಂತರ